ಪ್ರಬಂಧ

# ಬಸ್ಸೆಂಬ ಮಾಯಾ ಕವಿತೆ



**ದಾದಾಪೀರ್ ಜೈಮನ್**

ಕಲೆ: ಮುರಳೀಧರ ರಾಥೋಡ್

ಊರ ಕೊನೆಗಿದ್ದ ನಮ್ಮ ಗುಡಿಸಲ ರಾತ್ರಿಗಳಲ್ಲಿ ಎಳೆಯ ನನ್ನ ಕಣ್ಣುಗಳೊಳಗೆ ಬೀಳುತ್ತಿದ್ದ ಅದ್ಭುತ ಸುದೀರ್ಘ ಕನಸುಗಳಲ್ಲಿ ಈ ಸಲದ ಬೇಸಿಗೆ ರಜೆಗೂ ನನ್ನವ್ವ ಏಳು ಊರಾಚೆಯಿರುವ ನಮ್ಮ ದೊಡ್ಡವ್ವನ ಮನೆಗೆ ಕಳಿಸುತ್ತಾರೆ ಎನ್ನುವುದೊಂದು ಪುಳಕಕ್ಕೆ ಕಾರಣವಾದರೆ, ಆ ನೆಪದಿಂದ ಬಸ್ಸಿನಲ್ಲಿ ಪ್ರಯಾಣ ಮಾಡುವ ಅವಕಾಶ ಸಿಗುತ್ತದಲ್ಲ ಎನ್ನುವುದು ಆ ಪುಳಕದ ಆರಾಧನೆಗೆ ನನ್ನನ್ನು ಸಜ್ಜು ಮಾಡುತ್ತಿತ್ತು. ಆಗ ನಾವಿದ್ದ ಓಣಿಯನ್ನು ಚಲುವಾದಿಗಳ ಓಣಿ ಎಂದು ಕರೆಯುತ್ತಿದ್ದರು. ಆ ಓಣಿಯಲ್ಲಿದ್ದ ಒಂದೇ ಒಂದು ಪಿಂಜಾರರ ಕುಟುಂಬ ನಮ್ಮದಾಗಿತ್ತು. ನನಗೋ ಬಸ್ಸಿನಲ್ಲಿ ಹರಿಜನಕೇರಿಯ ಮಂಗಮ್ಮನೋ, ಆಚೆ ಓಣಿಯ ಶೆಟ್ಟರ ಮನೆಯ ವಾಣಿಯಕ್ಕನೋ, ನಮಗೆ ವರ್ಷಕ್ಕೆ ನೂರು ರೂಪಾಯಿ ನೆಲಬಾಡಿಗೆಗೆ ಗುಡಿಸಲು ಹಾಕಿಕೊಳ್ಳಲು ಜಾಗ ಕೊಟ್ಟಿದ್ದ ರೇಣುಕಾ ಟಾಕೀಸ್ ಹತ್ತಿರದ ಮನೆಯ ಲೆಕ್ಚರರ್ ದಂಪತಿಗಳೋ, ರೇಣುಕಾ ಟಾಕೀಸ್ ಪಕ್ಕದಲ್ಲಿಯೇ ಇದ್ದ ನಮ್ಮ ಜೀವನ ದರ್ಶನ ಹಿರಿಯ ಪ್ರಾಥಮಿಕ ಶಾಲೆಯ ಮಿಸ್ಸೋ, ಸಾರೋ ಅಥವಾ ನನ್ನ ಗೆಳೆಯರನ್ನೋ ಒಂದೇ ಬಸ್ಸಿನಲ್ಲಿ ನೋಡಿದರೂ ನೋಡಬಹುದು, ಅವರ ಜೊತೆ ಪ್ರಯಾಣಿಸುವ ಖುಷಿ ಸಿಕ್ಕರೂ ಸಿಗಬಹುದು ಎನ್ನುವುದು ಕನಸಿನ ಒಳ ಹೂರಣವಾಗಿರುತ್ತಿತ್ತು. ಆ ಕನಸಿಗಾಗಿ ನಾನು ಪ್ರತಿದಿನವೂ ಕಾಯುತ್ತಿದ್ದೆ. ಕನಸನ್ನು ನನಗೆ ಬೇಕಾದ ಹಾಗೆ ವಿಸ್ತರಿಸಿಕೊಳ್ಳುತ್ತಿದ್ದೆ.

ಊರಿಗೆ ಹೊರಡುವ ಮುಂಚೆ ಅವ್ವ ನನಗೆ ಒಂದು ತಾಸು ಮುಂಚೆಯೇ ಹೋಗಿ ಸೀಟು ಹಿಡಿದುಕೊಂಡು ಕೂರಲು ಹೇಳುತ್ತಿದ್ದಳು. ನಾನೂ ಉತ್ಸಾಹದಿಂದ ನಮ್ಮ ಕೊಟ್ಟೂರಿನ ಹೃದಯಭಾಗವಾದ ಸರ್ಕಾರಿ ಬಸ್ ಸ್ಟಾಂಡ್ ಎದುರುಗಡೆಯೇ ನಿಂತಿರುತ್ತಿದ್ದ ಖಾಸಗಿ ಬಸ್ಸಿನ ಹತ್ತಿರ ಸಾಗುತ್ತಿದ್ದೆ. ಕೊಟ್ಟೂರಿನ ಹತ್ತರಲ್ಲಿ ಆರು ಬಸ್ಸುಗಳ ಹೆಸರು ಶ್ರೀ ಗುರುಕೊಟ್ಟೂರೇಶ್ವರ ಟ್ರಾವೆಲ್ಸ್ ಆಗಿರುತ್ತಿತ್ತು. ಬಸ್ಸು ಹತ್ತಿ ಮುಂದಿನಿಂದ ಎರಡನೆಯದೋ ಮೂರನೆಯದೋ ಸೀಟನ್ನೋ ಹಿಡಿದು ಕೂರಬೇಕಾಗಿತ್ತು. ನಾನು ಅದರಲ್ಲಿಯೂ ಕಿಟಕಿ ಪಕ್ಕದ ಸೀಟು ಹಿಡಿಯಬೇಕೆಂಬ ಹಂಬಲದಿಂದ ಕುಣಿಕುಣಿದು ಬಸ್ಟ್ಯಾಂಡ್ ತಲುಪುತ್ತಿದ್ದೆ. ಹತ್ತುವಾಗಲೇ ಬಸ್ಸಿನ ತುಂಬಾ ಆವರಿಸಿದ ಊದಿನಕಡ್ಡಿಯ ಘಮ, ಮತ್ತದರ ಗಾಢವಾದ ಪರಿಮಳ ನನ್ನ ಹೊಟ್ಟೆಯನ್ನು ಕಿವುಚಿ ವಾಂತಿ ಬರಿಸುವಂತಾದರೂ ಬಸ್ಸಿನ ಪ್ರಯಾಣದ ಖುಷಿಗಾಗಿ ಅದನ್ನು ಸಹಿಸಿಕೊಳ್ಳುತ್ತಿದ್ದೆ. ಬಸ್ಸು ಒಮ್ಮೆ ಹೊರಡಲು ಅಣಿಯಾದರೆ ಒಳಗೆಲ್ಲ ತುಂಬಿಕೊಳ್ಳುವ ಹಿತವಾದ ತಂಗಾಳಿ ಭವಿಷ್ಯದ ಭರವಸೆಯಂತೆ ನನಗೆ ಕಾಣುತ್ತಿತ್ತು.

ಅಮ್ಮ ಬಸ್ಸು ಹೊರಡುವ ಸಮಯಕ್ಕೆ ಕೈಯಲ್ಲಿ ಒಂದು ಬಟ್ಟೆಯ ಹೆಣೆದ ಬ್ಯಾಗು, ಅದರೊಳಗೆ ಹೂಕಟ್ಟುವ ತನ್ನ ಕಾಯಕದಲ್ಲಿ ಕದ್ದು ಉಳಿಸಿದ ದುಂಡುಮಲ್ಲಿಗೆ, ಕನಕಾಂಬರ, ನಮ್ಮ ಗುಡಿಸಲ ಮುಂದೆ ಅವಳು ಆಸ್ಥೆಯಿಂದ ಹಾಕಿ ಬೆಳೆಸಿದ್ದ ಕಾಮಕಸ್ತೂರಿಯ ಎಲೆಗಳನ್ನು ಸೇರಿಸಿ ದೊಡ್ಡಮ್ಮನಿಗೆಂದೇ ಕಟ್ಟಿದ ಹೂಮಾಲೆ, ಶೆಟ್ಟರ ಬೇಕರಿಯಿಂದ ತಂದ ಬ್ರೆಡ್ಡಿನ ಪ್ಯಾಕು, ಅವಳೇ ತನ್ನಕ್ಕನಿಗಾಗಿ ಮಾಡಿಕೊಂಡ ಮಂಡಕ್ಕಿ ವಗ್ಗರಣೆ, ಹಿಟ್ಟಚ್ಚಿದ ಮೆಣಸಿನಕಾಯಿಯ ಘಮ ಅವಳು ಬಸ್ಸಿನ ಮೆಟ್ಟಿಲು ಹತ್ತಿದ ತಕ್ಷಣ ನನ್ನ ಮೂಗಿಗೇ ನೇರ ಬಂದು ಬಡಿಯುತ್ತಿತ್ತು! ಪ್ರಯಾಣಕ್ಕೆ ಹುರುಪು